ಶ್ರೀರಾಮಕೃಷ್ಣರ ಅದ್ಭುತ ಸಂಪರ್ಕಕ್ಕೆ ಬಂದು ಗುರಿಯನ್ನು ಸಾಧಿಸಿಕೊಂಡರು. ಅಲ್ಲದೆ ಅವರಲ್ಲಿ ಕೆಲವರು ತಮ್ಮ ತಮ್ಮ ಸ್ಥಾನಕ್ಕೆ ಹಿಂದಿರುಗಿದ ಮೇಲೆ ತಮ್ಮ ಸಂಪ್ರದಾಯಗಳಿಗೆ ಸೇರಿದ ಸಾಧಕರನ್ನು ತಮ್ಮದೇ ಮಾರ್ಗದಲ್ಲಿ ಭಗವತ್ ಸಾಕ್ಷಾತ್ಕಾರ ಪಡೆಯುವುದಕ್ಕೆ ಮಾರ್ಗದರ್ಶಕರಾದರು. ಭೈರವಿ ಬ್ರಾಹ್ಮಣಿ, ತೋತಾಪುರಿ ಮುಂತಾದವರು ಶ್ರೀರಾಮಕೃಷ್ಣರಿಗೆ ಗುರುಗಳಂತೆ ಬಂದು, ಅವರ ಸಾಧನೆಗೆ ಸಹಾಯ ಮಾಡುವ ಸುಯೋಗ ಪಡೆದಿದ್ದರು. ಆದರೆ ಅವರುಗಳು ಸಹ ಶ್ರೀರಾಮಕೃಷ್ಣರ ದಿವ್ಯಶಕ್ತಿಯ ಪ್ರಭಾವದಿಂದ ತಮಗೆ ಬಹುಕಾಲದ ಸಾಧನೆಯಿಂದ ಸಾಧ್ಯವಾಗಿರದ ಆಧ್ಯಾತ್ಮಿಕ ಜೀವನದ ಗೂಢತತ್ತ್ವಗಳನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಸಮರ್ಥರಾದರು. ಶ್ರೀರಾಮಕೃಷ್ಣರು ಕೇವಲ ಅವತಾರಗಳಲ್ಲಿ ವರಿಷ್ಠರಾಗಿದ್ದಲ್ಲದೆ, ಆಚಾರ್ಯರಲ್ಲಿ ಮಹಾಚಾರ್ಯರೂ ಆಗಿದ್ದರು – **'ಆಚಾರ್ಯಾಣಾಂ ಮಹಾಚಾರ್ಯಃ...'**. ಆದರೂ ಅವರಲ್ಲಿ ಲವಲೇಶವೂ ಅಹಂಭಾವ ಇರಲಿಲ್ಲ. ಬದಲಾಗಿ, 'ತಾಯಿ ತನ್ನ ಕೆಲಸವನ್ನು ಮಾಡುತ್ತಿದ್ದಾಳೆ. ಜಗತ್ತಿನ ಕೆಲಸವನ್ನು ಮಾಡುವುದಕ್ಕೆ, ಲೋಕಶಿಕ್ಷಣ ನೀಡುವುದಕ್ಕೆ ನಾನಾರು?' ಎಂಬ ಮನೋಭಾವವಿತ್ತು. ಆದ್ದರಿಂದಲೇ ಅವರಲ್ಲಿ ಗುರುಭಾವವು ಸ್ವಾಭಾವಿಕವಾಗಿದ್ದು ಸದಾ ನೈಜ ಆಧ್ಯಾತ್ಮಿಕ ಗುರುವಿನ ಸ್ಥಾನದಲ್ಲಿ ನೆಲೆಸಿದ್ದರು. ಇತರರು ಆಚಾರ್ಯ ಪದವಿಯ ಸನ್ಮಾನಕ್ಕಾಗಿ ಬಾಯಿಬಿಡುತ್ತಾರೆ; ಆದರೆ ಶ್ರೀರಾಮಕೃಷ್ಣರು ಅದನ್ನು ತುಚ್ಛವೆಂದು ಭಾವಿಸಿ ಆಗಾಗ ತಾಯಿಯೊಡನೆ ಅದನ್ನು ಹಿಂತೆಗೆದುಕೊಳ್ಳೆಂದು ಜಗಳವಾಡುತ್ತಿದ್ದರು.

### ಗುರುವಿನ ಲಕ್ಷಣಗಳು

'ಶ್ರೀರಾಮಕೃಷ್ಣ ವಚನವೇದ'ದಲ್ಲಿ ಹಲವಾರು ಬಾರಿ ಬರುವ ಪದ 'ಕಾಮಿನಿ ಕಾಂಚನ ತ್ಯಾಗ'. ಗುರುವಿನಲ್ಲಾಗಲಿ, ಸಾಧಕನಲ್ಲಾಗಲಿ ಇರಬೇಕಾದ ಅತ್ಯಂತ ಮುಖ್ಯ ಲಕ್ಷಣವಿದು.

ಶ್ರೀರಾಮಕೃಷ್ಣರಲ್ಲಿ ತ್ಯಾಗಭಾವ ಎಷ್ಟೊಂದು ರೂಢಮೂಲವಾಗಿತ್ತೆಂದರೆ ಅವರ ದೇಹಕ್ಕೆ ಲೋಹವು ತಾಕಿದರೆ ಚೇಳು ಕುಟುಕಿದಂತಾಗುತ್ತಿತ್ತು ಮತ್ತು ಉಸಿರಾಟವೇ ನಿಂತಂತಾಗಿ ಹೃದಯದಲ್ಲಿ ತಡೆಯಲಾಗದ ವೇದನೆಯುಂಟಾಗುತ್ತಿತ್ತು. ಸ್ತ್ರೀಯರನ್ನು ನೋಡಿದ ಕೂಡಲೇ ಅದು ಜಗಜ್ಜನನಿಯ ಪ್ರತಿಮೂರ್ತಿಯಂತೆ ಕಾಣುತ್ತಿತ್ತು.

ಅವರಿಗೆ ಅತ್ಯಂತ ಪ್ರಿಯನಾದ ಮಥುರನು ಸಾವಿರಾರು ರೂಪಾಯಿಗಳನ್ನು ದಾನವಾಗಿ ಕೊಡಲು ಬಂದಾಗ ಕೋಪದಿಂದ ಅವನನ್ನು ಹೊಡೆಯಲು ಹೋಗಿದ್ದರು. ಮಾರ್ವಾಡಿ ಭಕ್ತ ಮತ್ತು ಮಥುರಾನಾಥರು ಶ್ರೀರಾಮಕೃಷ್ಣರ ಭವಿಷ್ಯ ಜೀವನೋಪಾಯಕ್ಕೆಂದು ಹಣ ಇಡಲು ಪ್ರಯತ್ನಿಸುತ್ತಿದ್ದಾರೆಂಬ ವಿಚಾರ ತಿಳಿದಾಗ ತಮ್ಮ ತಲೆಯನ್ನು ಯಾರೋ ಗರಗಸದಿಂದ ಕೊಯ್ದಂತೆ ವೇದನೆ ಉಂಟಾಯಿತು ಎನ್ನುತ್ತಾರೆ ಶ್ರೀರಾಮಕೃಷ್ಣರು. ಅವರ ಮನಸ್ಸಿನಲ್ಲಿ ಭೋಗೇಚ್ಛೆ ಲವಮಾತ್ರವೂ ಇರಲಿಲ್ಲ!

'ನಾನು ದಾಸನ ದಾಸನ ದಾಸನ ದಾಸಾನುದಾಸ' ಎಂದು ಹೇಳುತ್ತಿದ್ದ ಶ್ರೀರಾಮಕೃಷ್ಣರು ಅಹಂಕಾರಶೂನ್ಯರಾಗಿದ್ದರು. ಮಾಯೆ ಅವರನ್ನು ಸ್ಪರ್ಶಿಸುವುದಿರಲಿ ಅವರ ಹತ್ತಿರೂ ಬರಲು ಸಾಧ್ಯವಾಗಲಿಲ್ಲ. ವೈರಾಗ್ಯವೇ ಮೂರ್ತಿವೆತ್ತಂತೆ ಇದ್ದರು. ಒಮ್ಮೆ ಮಥುರನ ಮಗ ತ್ರೈಲೋಕ್ಯನು ಹೃದಯನ ಮೇಲೆ ಕೋಪಗೊಂಡು ದೇವಸ್ಥಾನ ಬಿಟ್ಟು ಹೋಗಲು ಆಜ್ಞಾಪಿಸಿದನು. ಇದು ಶ್ರೀರಾಮಕೃಷ್ಣರ ಕಿವಿಗೆ ಬಿದ್ದಕೂಡಲೇ, ಅವನು ತಮಗೂ ಹೊರಟುಹೋಗಲು ತಿಳಿಸಿರಬೇಕೆಂದು ಅವರು ಭಾವಿಸಿ, ಆ ಜಾಗವನ್ನು ಬಿಟ್ಟು ಹೊರಟೇಬಿಟ್ಟರು. ತಮ್ಮ ಪ್ರಾಣಕ್ಕಿಂತ ಮಿಗಿಲಾಗಿ ಪ್ರೀತಿಸುತ್ತಿದ್ದ ಆ ಕಾಳಿಗಾಗಲೀ, ಸಾಧನೆ ಮಾಡುತ್ತಿದ್ದ ಆ ಮಂದಿರ, ಕೋಣೆ ಇತ್ಯಾದಿ ಯಾವುದಕ್ಕೂ ಅವರು ತಮ್ಮ ಮನಸ್ಸನ್ನು ಕಟ್ಟಿ ಹಾಕಿರಲಿಲ್ಲ. ಅಷ್ಟರಲ್ಲಿ ತ್ರೈಲೋಕ್ಯನು ಶ್ರೀರಾಮಕೃಷ್ಣರ ಬಳಿಗೆ ಬಂದು ಪ್ರಾರ್ಥಿಸಿಕೊಂಡನು, ''ನೀವು ಹೋಗಬೇಕೆಂದು ನಾನು ಹೇಳಲಿಲ್ಲ. ನೀವೇಕೆ ಹೋಗುತ್ತಿದ್ದೀರಿ? ಹೃದಯನಿಗಷ್ಟೇ ಹೇಳಿದೆ. ನೀವು ದಯವಿಟ್ಟು ಬನ್ನಿ'' ಎಂದು. ಶ್ರೀರಾಮಕೃಷ್ಣರು ಮೊದಲಿನಂತೆಯೇ ಮುಗುಳ್ನಗುತ್ತಾ ಹಿಂದಿರುಗಿ ಬಂದು ತಮ್ಮ ಕೊಠಡಿಯಲ್ಲಿ ಕುಳಿತರು.

### ಜಗದ್ಗುರು ಶ್ರೀರಾಮಕೃಷ್ಣರು

ಶ್ರೀರಾಮಕೃಷ್ಣರು ಕೇವಲ ದಿವ್ಯಗುರುವಲ್ಲದೆ ಜಗದ್ಗುರು, ವಿಶ್ವಗುರು, ಯುಗಪ್ರವರ್ತಕರೂ ಆಗಿದ್ದರು. ಸ್ವಾಮಿ ವಿವೇಕಾನಂದರ ಮೂಲಕ ಶ್ರೀರಾಮಕೃಷ್ಣರ ಭಾವನೆಗಳು ಅಮೆರಿಕಾ ಮತ್ತು ಯೂರೋಪ್ ದೇಶಗಳನ್ನು ಪ್ರವೇಶಿಸಿ ಅತ್ಯಲ್ಪ ಕಾಲದಲ್ಲಿಯೇ ಜಗತ್ತಿನಲ್ಲಿ ಒಂದು ಹೊಸ ಕ್ರಾಂತಿಯುಂಟು ಮಾಡಿರುವುದು ಎಲ್ಲರಿಗೂ ತಿಳಿದ ವಿಷಯವೇ. ಆಧುನಿಕ ಶಿಕ್ಷಣವನ್ನು ಪಡೆದ ಜನರಲ್ಲಿ ತನ್ನ ಪ್ರಭಾವವನ್ನು ಹೇಗೆ ವಿಸ್ತರಿಸುತ್ತಿದೆ ಎಂಬುದು ಸಹ ಸರ್ವವಿದಿತ.

ಸ್ವತಃ ಸ್ವಾಮಿ ಶಾರದಾನಂದರೇ ಹೀಗೆಂದು ಬರೆಯುತ್ತಾರೆ:

'ಶ್ರೀರಾಮಕೃಷ್ಣರ ಗುರುಭಾವವು ಕೇವಲ ಭಾರತೀಯ ಧರ್ಮಗಳಲ್ಲಿ ಇರುವ ವಿವಾದವನ್ನು ದೂರಮಾಡಿ ಒಂದು ವಿಶೇಷತೆಯನ್ನು ಉಂಟುಮಾಡುವುದು ಮಾತ್ರವಲ್ಲದೆ ಏಷಿಯಾದ ಧರ್ಮವಿವಾದವನ್ನು ಬಗೆಹರಿಸುವುದೂ, ಯೂರೋಪಿನ ಧರ್ಮಹೀನತೆಯನ್ನು ಹೋಗಲಾಡಿಸುವುದೂ ಮತ್ತು ಪೃಥ್ವಿಯಲ್ಲಿ ಒಂದು ಅಪೂರ್ವ ಶಾಂತಿಯ ರಾಜ್ಯವು ನೆಲೆಸುವಂತೆ ಮಾಡುವುದೂ ಆಗಿತ್ತು ... ದಿನ ಕಳೆದಂತೆ, ತಿಂಗಳುಗಳು ಉರುಳಿದಂತೆ, ವರ್ಷಗಳು ಮುಂದುವರಿದಂತೆ ಈ ಅಮೋಘ ಭಾವರಾಶಿಯು ಎಲ್ಲಾ ದೇಶಗಳ ಎಲ್ಲಾ ಧರ್ಮಗಳ ಮತ್ತು ಎಲ್ಲಾ ಸಮಾಜಗಳ ಮೇಲೆ ತನ್ನ ಪ್ರಭಾವವನ್ನು ವಿಸ್ತರಿಸಿ ಅದ್ಭುತ ಯುಗಪರಿವರ್ತನೆ ಆಗುವಂತೆ ಮಾಡುವುದು. ಇದರ ಮುನ್ನಡೆಯನ್ನು ತಡೆಯುವವರಾರು? ಯಾವುದರ ಮೂಲಕ ಇದು ಪ್ರಚಾರವಾಗುತ್ತಿದೆಯೋ ಅದು ನುಚ್ಚುನೂರಾಗಬಹುದು ಮತ್ತು ಇದರ ಮೂಲ ಯಾವುದು ಎಂದು ಯಾರಿಗೂ ಕಂಡುಹಿಡಿಯಲಾಗದೆ ಇರಬಹುದು. ಆದರೆ ಅನಂತ ಮಹಿಮೆಯಿಂದ ಕೂಡಿದ ಶ್ರೀರಾಮಕೃಷ್ಣರ ಭಾವರಾಶಿಯನ್ನು ಅವಲಂಬಿಸಿಯೇ ಮತ್ತು ಅದರ ಅಚ್ಚಿನಲ್ಲಿಯೇ ತಮ್ಮ ಜೀವನವನ್ನು ರೂಪಿಸಿಕೊಂಡು ಪೃಥ್ವಿಯ ಸಮಸ್ತ ಜನರು ಒಂದು ದಿನ ಧನ್ಯತೆಯನ್ನು ಪಡೆಯುತ್ತಾರೆ ಎಂಬುದು ನಿಶ್ಚಯ.' *(ಶ್ರೀರಾಮಕೃಷ್ಣ ಲೀಲಾಪ್ರಸಂಗ – ಸಂ ೨, ಪು. ೭೨-೭೩)*

# ಸಮರ್ಪಿತ ಭಕ್ತ ಶ್ರೀ ಜಗಜೀವನರಾಮ

ಮೂಲ ಹಿಂದೀ: **ಸ್ವಾಮಿ ಜಪಾನಂದ** ಕನ್ನಡಕ್ಕೆ : **ರೂಪಶ್ರೀ ನಾಗರಾಜ್**

ಭಕ್ತಿ ಗ್ರಂಥಗಳಲ್ಲಿ ಸಮರ್ಪಿತ ಜೀವನ, ಆತ್ಮಸಮರ್ಪಣೆ, ಹಾಗೂ ಶರಣಾಗತಿಯ ಅನೇಕ ದೃಷ್ಟಾಂತಗಳು ಸಿಗುತ್ತವೆ. ಭಕ್ತರ ಜೀವನದಲ್ಲಿ ಇದೇ ಬಹು ಮುಖ್ಯವಾದ ವಿಷಯವೂ ಆಗಿರುತ್ತದೆ. ಸಾಧನೆಯ ಚರಮಸಿದ್ಧಿಯು ಇದರಲ್ಲೇ ಸ್ಥಾಪಿತವಾಗಿದೆ. ಭಾರತೇತರ ದೇಶಗಳಲ್ಲೂ ಅಚಲ ಶ್ರದ್ಧೆ ಅಥವಾ ಶರಣಾಗತಿಯ ಭಾವನೆಯನ್ನು ಹೊಂದಿರುವ ಭಕ್ತರ ಜೀವನಗಳಲ್ಲಿ ಸಂಪೂರ್ಣ ಆತ್ಮ-ಸಮರ್ಪಣೆ ಅಥವಾ ಭಗವತ್ ಕೃಪೆಯ ಮೇಲೆ ನಂಬಿಕೆಯಿಟ್ಟಿರುವ ಅನೇಕ ಉದಾಹರಣೆಗಳು ಸಿಗುತ್ತವೆ. ಏಸುಕ್ರಿಸ್ತನ ಜೀವನವೂ ಇದೇ ರೀತಿಯ ಭಾವಕ್ಕೆ ಜ್ವಲಂತ ಉದಾಹರಣೆಯಾಗಿದೆ. ಅವನನ್ನು ಕಂಬಕ್ಕೆ ಬಿಗಿದು ಮೊಳೆಗಳನ್ನು ಹೊಡೆದು ಸಾಯಿಸುತ್ತಿದ್ದಾಗ ಕೂಡಾ 'Thine will be done', ಅಂದರೆ 'ನಿನ್ನ ಇಚ್ಛೆ ಪೂರ್ಣವಾಗಲಿ' ಎಂಬ ಶ್ರದ್ಧೆಯ ವಾಕ್ಯವೇ ಅವನ ಬಾಯಿಂದ ಹೊರಹೊಮ್ಮುತ್ತಿತ್ತು. ಅದು ಅವನ ಅಂತರಾಳದಿಂದ ಹೊರಹೊಮ್ಮುತ್ತಿದ್ದ ಮಾತಾಗಿತ್ತು. ಆದ್ದರಿಂದಲೇ ಏಸುಕ್ರಿಸ್ತ ಮಹಾನ್ ಎನಿಸಿದ!

ಭಾರತ ದೇಶದಲ್ಲಂತೂ ಹಳ್ಳಿಹಳ್ಳಿಗಳಲ್ಲಿ ಇಂತಹ ಭಕ್ತರು ಸಿಗುತ್ತಾರೆ. ಅವರ ಸಂಪೂರ್ಣ ಜೀವನ ಒಂದು ಆಧ್ಯಾತ್ಮಿಕದ ಸಮರ್ಪಿತ ಜೀವನವಾಗಿರುತ್ತದೆ. ಭಗವಂತನ ಮೇಲೆ ಸಂಪೂರ್ಣ ಶ್ರದ್ಧೆ, ಅತ್ಯಂತ ಪವಿತ್ರವಾದ ಕಮಲದ ಪುಷ್ಪದಂತೆ. ಅವರ ಜೀವನ ಆದರಣೀಯವೂ, ಹಾಗೇ ಭಕ್ತಿಮಾರ್ಗದಲ್ಲಿ ನಡೆಯುವ ಸಾಧಕರಿಗೆ ಅನುಕರಣೀಯವೂ ಆಗಿದೆ.

ಪರಿವ್ರಾಜಕ ಸಂನ್ಯಾಸಿಯು ೧೯೩೯ರಲ್ಲಿ ಕಾಥಿಯಾವಾಡಾದಲ್ಲಿ (ಇಂದಿನ ಸೌರಾಷ್ಟ್ರ) ತಿರುಗಾಡುತ್ತಿರುವಾಗ, ಒಬ್ಬ ಭಕ್ತ ಸೇವಕ ಬ್ರಾಹ್ಮಣ ಸಂನ್ಯಾಸಿಗೆ ಹೇಳಿದ: 'ಕಾಥಿಯಾವಾಡಾದಲ್ಲಿ ನಿಮಗೆ ಉಚ್ಚ ಸಂಸ್ಕಾರದ ಭಕ್ತರು ಬಹಳಷ್ಟು ಸಿಗುತ್ತಾರೆ. ಇಲ್ಲಿ ಸಂನ್ಯಾಸಿಗಳು ಕಮ್ಮಿ ಇರುತ್ತಾರೆ, ಭಕ್ತರು ಹೆಚ್ಚಾಗಿ ಇರುತ್ತಾರೆ. ಪೂರ್ವಕಾಲದಲ್ಲೂ ಈ ಭೂಮಿಯಲ್ಲಿ ಅನೇಕ ಭಕ್ತ ಶಿರೋಮಣಿಗಳು ಆಗಿ ಹೋಗಿದ್ದಾರೆ. ಅವರಲ್ಲಿ ಕೆಲವರು ನರಸೀ ಮೆಹ್ತಾ, ಅವರ ಸೋದರ ಪರ್ವತ್ ಮೆಹ್ತಾ, ಭೋಜಾ ಭಗತ್, ಲಾಲಾಭಗತ್ ಇಂತವರು. ನೀವು ಹೇಗೂ ತಿರುಗಾಡುತ್ತಿದ್ದೀರಲ್ಲ, ಇಂಥ ಭಕ್ತರ ಭೇಟಿ ಮಾಡಿ' ಎಂದ.

ಸಂನ್ಯಾಸಿಯು ''ಓ, ಧನ್ಯವಾದಗಳು, ನೀವು ಸರಿಯಾಗಿ ಹೇಳಿದ್ದೀರಿ. ಈಗ ಹೇಳಿ, ಪ್ರಸ್ತುತ ಕಾಲದಲ್ಲಿ ನೋಡಬಹುದಾದ ಭಕ್ತರು ಎಲ್ಲೆಲ್ಲಿ ಕಾಣಸಿಗುತ್ತಾರೆ? ಸುತ್ತಾಡುತ್ತಾ ಹಾಗೇ ಹೋಗಿ ಅವರನ್ನು ಭೇಟಿಯಾಗುತ್ತೇನೆ'' ಎಂದ.

ಬ್ರಾಹ್ಮಣ ಭಕ್ತ ಒಂದೆರಡು ಹೆಸರುಗಳನ್ನೂ, ಅವರ ಸ್ಥಳಗಳನ್ನೂ ತಿಳಿಸಿದ, ಅದರಲ್ಲಿ ಒಂದಂತೂ ತುಂಬಾ ದೂರವಿರಲಿಲ್ಲ. (ಈ ಬ್ರಾಹ್ಮಣ ಚೇತಪುರದಲ್ಲಿ ಭೇಟಿಯಾಗಿದ್ದರು) ಚೇತಪುರದ ಹತ್ತಿರ ಬಡಿಯಾ (ಒಂದು ಸಣ್ಣಪುಟ್ಟ ರಾಜ್ಯ) ಇದೆ. ಬಡಿಯಾದ ಪೂರ್ವ ಭಾಗಕ್ಕೆ ಒಂದು ಮೈಲು ದೂರದಲ್ಲಿ ಒಂದು ಹಳ್ಳಿಯಿದೆ, ಅಲ್ಲಿ ಒಬ್ಬ ಭಕ್ತರು ವಾಸವಾಗಿದ್ದರು. ಅವರ ಹೆಸರು ಭಕ್ತ ಜಗಜೀವನರಾಮ ಎಂದು. ಸಂನ್ಯಾಸಿಯು ಮಾರನೆಯ ದಿನ ಅಲ್ಲಿಗೆ ಹೊರಟ.

ಚಳಿಗಾಲ, ಸಾಕಷ್ಟು ಥಂಡಿ ಇತ್ತು, ಶೀತಗಾಳಿಯೂ ಬೀಸುತ್ತಿತ್ತು. ಆದರೆ ದಾರಿ ಸಾಗಲು ಏನೂ ಕಷ್ಟವಾಗಲಿಲ್ಲ. ಆ ಹಳ್ಳಿಯನ್ನು ತಲುಪಿದಾಗ ಮಧ್ಯಾಹ್ನ ಒಂದೂವರೆ ಗಂಟೆಯಾಗಿತ್ತು, ಊಟದ ಸಮಯವಾಗಿತ್ತು, ಹಳ್ಳಿಯಲ್ಲಿ ಯಾರನ್ನೋ ಕೇಳಿದಾಗ ಭಕ್ತರ ಮನೆಯನ್ನು ತೋರಿಸಿದರು. ಮನೆ ಸಾಕಷ್ಟು ದೊಡ್ಡದಾಗಿತ್ತು. ಸಾಧಾರಣ ಹಳ್ಳಿಯ ಮನೆಯಂತೆ ಇದ್ದರೂ, ಸಮೃದ್ಧಿಯುತವಾಗಿ ತೋರುತ್ತಿತ್ತು. ಬಾಗಿಲ ಬಳಿ ಹೋಗಿ ಸಂನ್ಯಾಸಿಯು ನೋಡಿದಾಗ, ಒಬ್ಬ ಸತ್ಪುರುಷರು ಮನೆದೇವರ ಪೀಠದ ಎದುರು ಕುಳಿತು ಯಾವುದೋ ದೊಡ್ಡ ಗ್ರಂಥವನ್ನು ಓದುತ್ತಿದ್ದರು. ''ನಾರಾಯಣ ಹರಿ'' ಎಂದು ಸಂನ್ಯಾಸಿಯು ಹೇಳಿದೊಡನೆಯೇ ಆ ವ್ಯಕ್ತಿಯು ನೋಡಿ, ತಕ್ಷಣ ಓಡೋಡುತ್ತ ಬಂದು ಆಲಂಗಿಸಿ ''ಓ ದೇವರೇ, ಬನ್ನಿ ಬನ್ನಿ, ನನ್ನ ಸೌಭಾಗ್ಯವೇ ಸೌಭಾಗ್ಯ'' ಎಂದು ಹೇಳುತ್ತ, ಸಂನ್ಯಾಸಿಯ ಕೈ ಹಿಡಿದು ಒಳಗೆ ಕರೆದುಕೊಂಡು ಹೋದರು ಮತ್ತು ತಮ್ಮ ಆಸನದ ಹತ್ತಿರವೇ ಕುಳಿತುಕೊಳ್ಳಲು ಚಾಪೆಯನ್ನು ಹಾಸಿದರು. ಊಟದ ಸಮಯ ಮೀರುತ್ತಿತ್ತು, ಸಾಕಷ್ಟು ಹಸಿವೆಯಾಗುತ್ತಿತ್ತು, ಆದರೆ ಆ ಭಕ್ತನು ನೀರನ್ನೂ ಕೇಳಲಿಲ್ಲ, ಊಟದ ಬಗ್ಗೆಯೂ ವಿಚಾರಿಸಲಿಲ್ಲ. ಅವರಂತೂ ಬೇರೆಯೇ ಪ್ರಸಂಗ ತೆಗೆದರು, ''ನಿಮಗೆ ಹಿಂದಿ ಬರುತ್ತದೆಯೆ? ಈ ತುಲಸೀ ರಾಮಾಯಣವನ್ನು ಓದುತ್ತಿದ್ದೇನೆ. ಅದರ ಬಹಳಷ್ಟು ವಿಷಯಗಳು ನನಗೆ ಅರ್ಥವಾಗುತ್ತಿಲ್ಲ, ಇವತ್ತು ಬೆಳಗ್ಗಿನಿಂದ ಇದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ, ಆದರೆ ಆಗುತ್ತಿಲ್ಲ. ಇಲ್ಲಿ ಹಿಂದಿ ಗೊತ್ತಿರುವವರೂ ಹೆಚ್ಚಿಲ್ಲ, ಅದರಲ್ಲೂ ನನಗೆ ಹೇಳಿಕೊಡುವಂತಹವರು ಇಲ್ಲವೆಂದೇ ಹೇಳಬೇಕು.'' ಹೀಗೆ..

ಸಂನ್ಯಾಸಿಯು ರಾಮಾಯಣವನ್ನು ತೆಗೆದುಕೊಂಡು ಅಲ್ಲಿ ಹೇಳಿದ ಅಂಶವನ್ನು ಅವರಿಗೆ ತಿಳಿಯಪಡಿಸಿದ, ಭಕ್ತರಿಗೆ ತುಂಬಾ ಖುಷಿಯಾಯಿತು. ಹಾಗಾಗಿ ಅವರು ಇನ್ನೊಂದು ಪ್ರಸಂಗವನ್ನು ತೆಗೆದರು. ನಂತರ ಇನ್ನೊಂದು, ಹೀಗೇ ಸುಮಾರು ಮೂರೂವರೆಯ ತನಕ ನಡೆಯಿತು. ಸಂನ್ಯಾಸಿಯಂತೂ ಈ ಭಕ್ತ ತಮ್ಮ ರಾಮಾಯಣದ ಪ್ರೀತಿಯಿಂದ ಬೇರೆ ಎಲ್ಲವನ್ನೂ ಮರೆತಿದ್ದಾರೆಂದು ಹರ್ಷವಾಯಿತು. ಹಸಿವೂ ಕಮ್ಮಿಯಾಗತೊಡಗಿತು. ಏಕೆಂ

ದರೆ ಮನಸ್ಸಿನಲ್ಲಿ 'ಇವತ್ತು ಉಪವಾಸವೇ' ಎಂಬ ಭಾವನೆ ಬಂದ ಮೇಲೆ, ಅದರ ತೀವ್ರತೆ ಕಮ್ಮಿಯಾಗಿಬಿಟ್ಟಿತು.

ಇಷ್ಟರಲ್ಲಿ ಪಕ್ಕದ ಕೊಠಡಿಯಿಂದ ತಲೆಯ ಮೇಲಿನ ಸೆರಗನ್ನು ತೆಗೆದ ನಾಲ್ಕೈದು ಮಹಿಳೆಯರು ಬಂದರು. ಅವರೊಂದಿಗೆ ಒಬ್ಬ ಯುವಕನೂ ಇದ್ದ. ''ಇಲ್ಲ, ಇನ್ನು ನಿಮ್ಮೊಂದಿಗೆ ಇರುವುದು ಸಾಧ್ಯವೇ ಇಲ್ಲ. ನನಗಂತೂ ಸಾಕಾಗಿ ಹೋಗಿದೆ. ನಿಮ್ಮಿಂದಲೇ ಇವತ್ತು ಮನೆಯಲ್ಲಿ ಎಲ್ಲರೂ ಹಸಿದುಕೊಂಡೇ ಇದ್ದಾರೆ. ಅರೆ, ಚಿಕ್ಕ ಮಕ್ಕಳಿಗೂ ಸಹ ಕುಡಿಯಲು ತಿನ್ನಲು ಇಲ್ಲ. ನಿಮ್ಮಿಂದಾಗಿಯೇ ಇಂಥ ಪರಿಸ್ಥಿತಿ ಬಂದಿದೆ. ಇನ್ನು ನಿಮ್ಮ ಜೊತೆಗಿರಲು ಸಾಧ್ಯವಾಗುವುದಿಲ್ಲ'' ಎಂದರು. ಆದರೆ ಈ ಭಕ್ತಮಹಾಶಯರು ಶಾಂತವಾಗಿ, ನಿರ್ವಿಕಾರವಾಗಿ ಕುಳಿತಿದ್ದರು. ಅವರ ಮುಖದಲ್ಲಿ ಯಾವುದೇ ಬದಲಾವಣೆ ಕಾಣಲಿಲ್ಲ. ಅದನ್ನು ನೋಡಿ ಸಂನ್ಯಾಸಿ ವಿಸ್ಮಿತನಾದ.

ಎಲ್ಲವನ್ನೂ ಕೇಳಿದ ಮೇಲೆ ಭಕ್ತರು ಹೇಳಿದರು, ''ಶಾಂತರಾಗಿರಿ ಎಲ್ಲರೂ. ಏನು ಹೇಳಬೇಕೆಂದಿದ್ದರೂ ಸಂಜೆಯ ಆರತಿ ಪ್ರಾರ್ಥನೆಯ ನಂತರ ಹೇಳಿ, ಈಗ ನಾನು ಸ್ವಾಮೀಜಿಯಿಂದ ಸ್ವಲ್ಪ ರಾಮಾಯಣವನ್ನು ಅರ್ಥ ಮಾಡಿಕೊಳ್ಳುತ್ತಿದ್ದೇನೆ. (ಸಂನ್ಯಾಸಿಯತ್ತ ತೋರಿಸಿ) ನಾನೇನಾದರೂ ಇವರನ್ನು ಕರೆಯಲು ಹೋಗಿದ್ದೆನ? ಇವರು ತಾವಾಗಿಯೇ ಬಂದಿದ್ದಾರೆ. ಶ್ರದ್ಧೆಯಿರಿಸಿ, ಶ್ರದ್ಧೆ! ಭಗವಂತನಿಗೆ ಗೊತ್ತಿಲ್ಲವೇ, ಇಂದು ನಮ್ಮ ಮನೆಯಲ್ಲಿ ಒಂದು ಕಾಳೂ ಇಲ್ಲವೆಂದು? ಇವರನ್ನು ನಮ್ಮ ಮನೆಗೆ ಕರೆತಂದವನಿಗೆ, ಏನಾದರೂ ವ್ಯವಸ್ಥೆ ಖಂಡಿತಾ ಆಗುತ್ತದೆಂದೇ ಕರೆತಂದಿದ್ದಾನೆ. ಶ್ರದ್ಧೆಯಿಡಿ, ನಂಬಿಕೆಯಿಡಿ. ಅವನಿಗೆ ನಮ್ಮ ಮನೆಯಲ್ಲಿ ಅನ್ನದ ಅಭಾವವಿದೆ ಎಂದು ಖಂಡಿತಾ ಗೊತ್ತು, ಆದರೂ ಇವರನ್ನು ಕರೆತಂದ. ಹಾಗಾಗಿ ಇವರಿಗೂ ವ್ಯವಸ್ಥೆ ಆಗಿಯೇ ಆಗುತ್ತದೆ. ನಂಬಿಕೆ ಇಟ್ಟುಕೊಳ್ಳಿ, ಈಗ ಹೋಗಿ, ಸಂಜೆ ಮಾತುಕತೆ ಆಡೋಣ''' ಎಂದರು.

ಅವರಿಗೆಲ್ಲ ಎಷ್ಟು ಕೋಪ ಬಂದಿತೆಂದರೆ, ಅಲ್ಲಿಯವರೆಗೂ ಸಂನ್ಯಾಸಿಯನ್ನು ಅವರು ಗಮನಿಸಿಯೇ ಇರಲಿಲ್ಲ. ಆ ಯುವಕ ಸಂನ್ಯಾಸಿಯ ಕಡೆ ತಿರುಗಿ ಜೋರಾಗಿ ಹೇಳತೊಡಗಿದ, ''ನೋಡಿ ಸ್ವಾಮೀಜಿ, ಇಂದು ನಾವೆಲ್ಲ ಹಸಿದುಕೊಂಡೇ ಇದ್ದೇವೆ. ಒಲೆಯಲ್ಲಿ ಬೆಂಕಿ ಹಚ್ಚಿಯೇ ಇಲ್ಲ. ಮಕ್ಕಳೆಲ್ಲ ಆಹಾರವಿಲ್ಲದೆ ಇದ್ದಾರೆ, ಇವತ್ತೇ ಬೆಳಿಗ್ಗೆ ಇಪ್ಪತ್ತು ಜನ ಬೈರಾಗಿ ಸಂತರು ಹೊರಟರು. ಅವರುಗಳು ಇಲ್ಲಿ ೧೫-೧೬ ದಿನಗಳು ತಂಗಿದ್ದರು ಮತ್ತು ನೀವು (ಭಕ್ತರ ಕಡೆ ತಿರುಗಿ) ಅವರ ಆತಿಥ್ಯದಲ್ಲಿ ಆನಂದದಲ್ಲಿ ಇದ್ದೀರಿ. ಪ್ರತಿದಿನ ಪೂರ್ತಿ ಅಡುಗೆ-ಪಾಯಸ, ಪೂರಿ ಇತ್ಯಾದಿಗಳೆಲ್ಲ ಬೇಕೇ ಬೇಕು. ಯಾಕೆಂದರೆ ಸಂತರು ತಂಗಿದ್ದಾರಲ್ಲ! ಮನೆಯಿಂದ ಎಷ್ಟು ಸಾಧ್ಯವೋ, ಅಕ್ಕಿ ಇತ್ಯಾದಿ ಎಲ್ಲವನ್ನೂ ಕೊಡುತ್ತಿದ್ದಿರಿ, ನಂತರ ಅಕ್ಕಪಕ್ಕದ ಮನೆಗಳಿಂದ ಬೇಡಿ ತಂದುಕೊಟ್ಟಿರಿ, ಎಲ್ಲರಿಗೂ ಗೊತ್ತು. ಇವರು ಅವರನ್ನೆಲ್ಲ ಹೋಗಲು ಹೇಳಿಲ್ಲ ಎಂದು. ಆದರೆ ನನಗೆ ತಡೆಯಲಾಗಲಿಲ್ಲ. ಬೆಳಿಗ್ಗೆ ನಾನು ಕೈ ಮುಗಿದು ನಿಂತುಬಿಟ್ಟೆ. ಅವರೆಲ್ಲ ಜುನಾಗಡದ ಕಡೆ ಹೊರಟರು. ಹಾಗಾಗಿಯೇ ನಾವೆಲ್ಲ ನಿಶ್ಚಯಿಸಿದೆವು, ನಾವೆಲ್ಲ ಉಪವಾಸವಿದ್ದುಕೊಂಡು ಇವರಿಗೆ (ದೊಡ್ಡಪ್ಪನಿಗೆ) ಸ್ವಲ್ಪ ಬೋಧನೆ ಮಾಡೋಣ ಎಂದು. ಈ ರೀತಿ ಮಾಡುವುದು ಅನುಚಿತ, ನಮ್ಮ ಸಾಮರ್ಥ್ಯವನ್ನು ಮೀರಿ ಆತಿಥ್ಯವನ್ನು ಮಾಡುವುದು ಶಾಸ್ತ್ರಸಮ್ಮತವೇ ಹೇಳಿ'' ಎಂದ.

ಭಕ್ತರು ಹೇಳಿದರು, ''ಈ ಎಲ್ಲ ಚರ್ಚೆ ಸಾಕು ಈಗ, ನಾನಂತೂ ಹೇಳಿದ್ದೇನಲ್ಲ, ನನ್ನಿಂದ ಈ ರೀತಿ ಹೇಳಲು ಸಾಧ್ಯವಿಲ್ಲ ಎಂದು! ನಾನು ಕರೆದು ತರುವುದಿಲ್ಲ, ಆದರೆ ಬಾಗಿಲಲ್ಲಿ ಯಾರಾದರೂ ಬಂದು ನಿಂತಾಗ ಖಂಡಿತ ಸ್ವಾಗತಿಸುತ್ತೇನೆ. ಆಯ್ತು, ಈಗ ಎಲ್ಲರೂ ಹೋಗಿ. ನಾನು ರಾಮಾಯಣವನ್ನು ತಿಳಿದುಕೊಳ್ಳುತ್ತೇನೆ!''

ಅವರೆಲ್ಲರೂ ಪಕ್ಕದ ಕೊಠಡಿಯೊಳಗೆ ಹೊರಟು ಹೋದರು. ಭಕ್ತ ಮಹಾಶಯ ಮತ್ತೆ ಮೊದಲಿನಂತೆಯೇ ಶಾಂತಚಿತ್ತರಾಗಿ ಕುಳಿತು ರಾಮಾಯಣವನ್ನು ಅರ್ಥ ಮಾಡಿಕೊಳ್ಳುವಲ್ಲಿ ಮಗ್ನರಾದರು. ಆ ವಿಷಯದಲ್ಲಿ ಒಂದು ಪದವನ್ನೂ ಉಚ್ಚರಿಸಲಿಲ್ಲ. ಸಂನ್ಯಾಸಿಗೆ ಈಗ ಗೊತ್ತಾಯಿತು. ಭಕ್ತರು ಊಟ-ತಿಂಡಿ ತೀರ್ಥದ ಬಗ್ಗೆ ಯಾಕೆ ವಿಚಾರಿಸಲಿಲ್ಲ ಎಂದು. ಹಿಂದಿಯಲ್ಲಿನ ಆಡುಮಾತಿನಂತೆ 'ಘರ್ ಮೆ ರಹೇ ಅನ್ ಕಾ ಟೋಟಾ, ತೋ ಪರೇಶಾನ್ ರಹತಾ ಹೈ ಮೋಟಾ ಸೇ ಭೀ ಮೋಟಾ.' ಆದರೆ ಭಕ್ತಮಹಾಶಯ ನಿಶ್ಚಿಂತರಾಗಿದ್ದರು, ಏಕೆಂದರೆ ಸಮಯ ಬಂದಾಗ ಪ್ರಭು ಪರಮೇಶ್ವರ ಸರಿಯಾದ ವ್ಯವಸ್ಥೆಯನ್ನು ಖಂಡಿತವಾಗಿ ಮಾಡುತ್ತಾನೆ ಎಂಬ ದೃಢ ನಂಬಿಕೆ ಅವರಿಗೆ ಇತ್ತು. ಅವರ ಪ್ರಶಾಂತವಾದ ಮುಖಾರವಿಂದದಲ್ಲಿ ಚಿಂತೆಯ ಒಂದು ಎಳೆಯೂ ಇರಲಿಲ್ಲ. 'ರಾಮ ಎಣಿಸಿದ್ದೇ ಆಗುತ್ತದೆ, ಅದಕ್ಕೆ ಚಿಂತೆ ಯಾಕೆ ಮನವೇ' ಎನ್ನುವಂತೆ, ಅವರು ಶ್ರದ್ಧೆಯ ಅಡಿಯಾಳಾಗಿದ್ದರು. ಈಗ ನಾಲ್ಕು ಗಂಟೆಯಾಯಿತು. ಚಳಿಗಾಲದಲ್ಲಿ ಸಂಜೆಯು ಬೇಗ ಆಗುತ್ತದೆ, ಹಾಗಾಗಿ ಸಂನ್ಯಾಸಿಯು ಅದಕ್ಕೆ ಮುಂಚೆಯೇ ಸಂಧ್ಯಾಕಾಲದ ಕಾರ್ಯಗಳನ್ನು ಮಾಡುವ ವಿಚಾರವನ್ನು ಯೋಚಿಸತೊಡಗಿದ. ಆದರೆ ಭಕ್ತರು ಅತ್ಯಂತ ಪ್ರೀತಿಯಿಂದ ರಾಮಯಣದ ಬಗ್ಗೆ ತಿಳಿಯುವುದನ್ನು ನೋಡಿ, ಹೇಳಲು ಸಂಕೋಚವೂ ಆಗುತ್ತಿತ್ತು ಅವನಿಗೆ. ಅಷ್ಟರಲ್ಲಿ ಒಬ್ಬ ರೈತ ಒಂದು ಪತ್ರವನ್ನು ಹಿಡಿದುಕೊಂಡು ಬಂದು, ''ಭಕ್ತ ಜಗಜೀವನರಾಯ ಅವರ ಮನೆ ಇದೇನಾ?'' ಎಂದು ಕೇಳಿದ.

''ಬಾರಪ್ಪ ಬಾ, ಎಲ್ಲಿಂದ ಬರುತ್ತಿದ್ದೀಯಾ?'' ಎಂದು ಕೇಳುತ್ತ ಭಕ್ತರು ಅವನನ್ನು ಒಳಗೆ ಕರೆದರು. ಕಾಗದವನ್ನು ತೆಗೆದುಕೊಂಡು ಓದಿ, ಕೂಡಲೇ ಜೋರಾಗಿ ಕೂಗಿದರು, ''ಅರೇ, ಎಲ್ಲರೂ ಇಲ್ಲಿಗೆ ಬನ್ನಿ. ಅರೇ ಅಣ್ಣಾ, ನೀನು ಸ್ವಲ್ಪ ಇಲ್ಲಿಗೆ ಬಾ, ಈ ಪತ್ರದಲ್ಲಿ ಏನಿದೆಯೆಂದು ನೋಡು ಸ್ವಲ್ಪ'' ಎಂದ. ಆ ಯುವಕನೂ ಎಲ್ಲ ಸ್ತ್ರೀಯರೂ ಬಂದರು. ಯುವಕನ ಕೈಯಲ್ಲಿ ಪತ್ರವನ್ನು ಕೊಟ್ಟು ಭಕ್ತರು ಅದನ್ನು ಎಲ್ಲರಿಗೂ ಓದಿ ಹೇಳಲು ಹೇಳಿದರು. ಅದರ ಸಾರಾಂಶ ಹೀಗಿತ್ತು. ''ಒಂಬತ್ತು-ಹತ್ತು ವರ್ಷಗಳ ಹಿಂದೆ ಶಿವರಾತ್ರಿಯ ಮೇಳದಲ್ಲಿ ಭಕ್ತಮಂಡಳಿಯ ಜೊತೆಗೆ ನೀವು ಜುನಾಗಡ್‌ಗೆ ಬಂದಿದ್ದಿರಿ, ಆ ದಿನಗಳಲ್ಲಿ ನಾನು ನಿರ್ಗತಿಕನಾಗಿದ್ದೆ. ಹಾಗಾಗಿ ನನಗೆ ಯಾರೂ ಆಶ್ರಯ ನೀಡುತ್ತಿರಲಿಲ್ಲ. ನೀವೊಬ್ಬರೇ ನನಗೆ ಗೌರವದಿಂದ ಆಶ್ರಯ ನೀಡಿ ನಿಮ್ಮೊಂದಿಗೆ ಸೇರಿಸಿಕೊಂಡಿರಿ